ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

# UNIVERSITY OF HORTICULTURAL SCIENCES, BAGALKOT

ದಿನಾಂಕ 23-03-2018 ರಂದು ಮಧ್ಯಾಹ್ನ 3:00 ಗಂಟೆಗೆ ವ್ಯವಸ್ಥಾಪನಾ ಸಭಾಂಗಣ, ಆಡಳಿತ ಕಟ್ಟಡ, ಉದ್ಯಾನಗಿರಿ, ತೋವಿವಿ, ಬಾಗಲಕೋಟದಲ್ಲಿ ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 44ನೇ ಸಭೆಯ ನಡುವಳಿಗಳು

## MINUTES OF 44th MEETING OF THE BOARD OF MANAGEMENT HELD ON 23-03-2018 AT 3.00 PM AT BOARD ROOM, ADMINISTRATIVE BUILDING, UDYANAGIRI, UHS, BAGALKOT

ಹಾಜರಾದ ಸದಸ್ಯರು

| | | | |
|---|---|---|---|
| 1. | ಡಾ. ಡಿ. ಎಲ್. ಮಹೇಶ್ವರ್<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ<br>ತೋವಿವಿ, ಬಾಗಲಕೋಟ | : | ಅಧ್ಯಕ್ಷರು |
| | **Dr. D. L. Maheswar**<br>Vice-Chancellor and Chairman<br>Board of Management,UHS, Bagalkot | : | Chairman |
| 2. | ಡಾ. ಕೆ. ಜಿ. ಪರಮೇಶ್ವರಪ್ಪ<br>ಸದಸ್ಯರು, ತೋವಿವಿ, ಬಾಗಲಕೋಟ<br>ನೀಲಾಮೃತಾ, ಮತೊಡು ಬಸ್ ನಿಲ್ದಾಣ ಹತ್ತಿರ<br>ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಎದುರುಗಡೆ<br>ಸವಳಂಗಾ ರಸ್ತೆ, ಅಬ್ಬಲಗೆರೆ ಅಂಚೆ, ಶಿವಮೊಗ್ಗ-577225 | : | ಸದಸ್ಯರು |
| | **Dr. K. G. Parameshwarappa**<br>Hon'ble Member, Board of Management, UHS, Bagalkot Neelamritha, Near Mathodu Bus Stop Opp: Agriculture University Organic Farming, Slowlanga Road, Abbalagere Post, Shivamogga-577225 | : | Member |
| 3. | ಶ್ರೀ ಶಂಕರಪ್ಪ ಬಸಪ್ಪ ಮಳಲಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 4. | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು, ಮದನಹಳ್ಳಿ ಪಂಚಾಯಿತು-563126,<br>ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ | : | ಸದಸ್ಯರು |
| | **Sri S. N. Manjunathagowda**<br>Member, Board of Management,<br>UHS, Bagalkot<br>Shettymadamangala Village, Velagalaburre Post,<br>Via Dalasanur, Madanahally Panchayath-563126,<br>Tq & Dist : Kolar | : | Member |

| | | | |
|---|---|---|---|
| 5. | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ, ಪಾಪರೆಡ್ಡಿಪಾಳ್ಯ, ನಾಗರಬಾವಿ,<br>ಬೆಂಗಳೂರು-560 072 | : | ಸದಸ್ಯರು |
| | **Sri. R. M. Nagesh**<br>Member, Board of Management, UHS Bagalkot<br>No. 25, Near Jubilee School, Papareddypalya,<br>Nagarbhavi, Bengaluru-560 072 | : | Member |
| 6. | ಶ್ರೀ ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ<br>ವೈದ್ಯ ಮಠ ಸಂಕೀರ್ಣ ಹಿಂದುಗಡೆ,ಧಾರವಾಡ-580008 | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS Bagalkot<br>No. 142, "Sadguru", 5th Cross,<br>Kusumnagar Main Road, Backside of Vaidya Math<br>Complex,Dharwad-580008 | : | Member |
| 7. | ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮಾರ್ಕೆಟ್ ರಸ್ತೆ, ಮಾರುತಿ ಗುಡಿ ಹಿಂಡುಗಡೆ,<br>ಮು:ಪೋ: ಉಪ್ಪಿನ ಬೆಟಗೇರಿ, ತಾ:ಜಿ: ಧಾರವಾಡ-581206 | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS Bagalkot<br>Market Road, Behind Maruti Temple<br>At Post: Uppin Betageri,Tq:Dist.: Dharwad-581206 | : | Member |
| 8. | ಡಾ. ಹೆಚ್. ಬಿ. ಲಿಂಗಯ್ಯ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. H. B. Lingaiah**<br>Director of Education and Member<br>Board of Management,UHS, Bagalkot | : | Member |
| 9. | ಡಾ. ಕೆ. ಎಂ. ಇಂದಿರೇಶ್<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯ<br>ಕಾರ್ಯದರ್ಶಿಗಳು |
| | **Dr. K. M. Indiresh**<br>Registrar & Member-Secretary,<br>Board of Management, UHS, Bagalkot | : | Member<br>Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ ಇವರು ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಗೌರವಾನ್ವಿತ ಕುಲಪತಿಗಳು ಮತ್ತು ಅಧ್ಯಕ್ಷರಾದ ಡಾ. ಡಿ. ಎಲ್. ಮಹೇಶ್ವರ್ ಇವರು ಕೂಡ ವ್ಯವಸ್ಥಾಪನಾ ಮಂಡಳಿಯ 44ನೇ ಸಭೆಗೆ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed members of the Board of Management to the meeting. Hon'ble Vice Chancellor and Chairman Dr. D. L. Maheshwar also welcomed all the members of Board of Management of UHS, Bagalkot for the 44th Meeting of Board of Management. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations on the agenda subjects, the following decisions were resolved during the Board meeting.

| | |
|---|---|
| ಕಾರ್ಯಸೂಚಿ ಸಂ.1 | ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರಧಾನ ಮಾಡಲು ಅನುಮೋದನೆ. |
| | ಚರ್ಚೆ ಮತ್ತು ಠರಾವು :<br>ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಉಪಸ್ಥಿತಿ ಮತ್ತು ಅನುಪಸ್ಥಿತಿಯಲ್ಲಿ ಪ್ರಧಾನ ಮಾಡುವ ಪ್ರಸ್ತಾವನೆಯನ್ನು ಹಾಗೂ ದಿನಾಂಕ 23.03.2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಶೀಲಿಸಿತು. ಸುಧೀರ್ಘ ಚರ್ಚೆಯ ನಂತರ, ಮಂಡಳಿಯು ಉಪಸ್ಥಿತಿ ಮತ್ತು ಅನುಪಸ್ಥಿತಿಯಲ್ಲಿ ದಿನಾಂಕ 24.03.2018 ರಂದು ಹಮ್ಮಿಕೊಂಡಿರುವ 7ನೇ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುತ್ತಿರುವ ಹಾಗೂ ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ಅರ್ಹ ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆಯನ್ನು ನೀಡಿತು.<br>(ಕ್ರಮ : ಕುಲಸಚಿವರು) |
| **Item No.1** | **Approval for conferring the Graduate & Post-Graduate Degrees to the eligible candidates during 7th Convocation.** |
| | **Discussion and Resolution :**<br>The Board examined the item of conferring Graduate and Post-Graduate Degrees to eligible candidates in the 7th Convocation of UHS, Bagalkot scheduled on 24.03.2018, both in Person and Absentia. The Board also perused the recommendations of Academic Council made in its meeting held on 23.03.2018 regarding conferring of degree. After detailed discussion, the Board of Management accorded its approval for the list of eligible candidates enclosed both in Person and Absentia for conferment of Graduate and Post-Graduate Degrees during the 7th Convocation of UHS Bagalkot scheduled on 24.03.2018 as put up in the agenda.<br>**(Action: Registrar)** |

| | |
|---|---|
| ಕಾರ್ಯಸೂಚಿ ಸಂ.2 | ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದಲ್ಲಿ ವಿಶ್ವವಿದ್ಯಾಲಯದ ಮತ್ತು ದಾನಿಗಳ ಚಿನ್ನದ ಪದಕಗಳನ್ನು ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿತರಿಸಲು ಅನುಮೋದನೆ. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ದಾನಿಗಳ ಚಿನ್ನದ ಪದಕಗಳನ್ನು ನೀಡುವ ಪ್ರಸ್ತಾವನೆಯನ್ನು ಮತ್ತು ದಿನಾಂಕ 23.03.2018ರ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಶೀಲಿಸಿತು ಮತ್ತು ಕಾರ್ಯಸೂಚಿಯಲ್ಲಿ ಮಂಡಿಸಿದ ಪಟ್ಟಿಯಂತೆ, ಅರ್ಹ ಅಭ್ಯರ್ಥಿಗಳಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ದಾನಿಗಳ ಚಿನ್ನದ ಪದಕಗಳನ್ನು ಪದವಿಯಲ್ಲಿ / ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಚಿನ್ನದ ಪದಕದ ನಿಯಮಾವಳಿಗಳ ಅನುಸಾರ ದಿನಾಂಕ 24.03.2018ರಂದು ಹಮ್ಮಿಕೊಂಡಿರುವ ಘಟಿಕೋತ್ಸವದಲ್ಲಿ ಅರ್ಹ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನೀಡಲು ತನ್ನ ಅನುಮೋದನೆಯನ್ನು ನೀಡಿತು.<br>(ಕ್ರಮ : ಕುಲಸಚಿವರು) |
| **Item No.2** | **Approval for award of UHS and Donor's Gold Medals to the Graduate & Post-Graduate students during 7th Convocation.** |
| | **Discussion & Resolution :**<br>The Board examined the details of award of Gold Medal as per the recommendation of the Academic Council in its meeting held on 23.03.2018. The Board accorded its approval for the list of eligible candidates enclosed for award of Gold Medals of UHS and Donors to the eligible Graduate and Post-Graduate Students who have secured the highest marks in the degree/subjects as per UHS Gold Medal rules to be awarded in the 7th Convocation of UHS Bagalkot scheduled on 24.03.2018 as put up in the agenda.<br>**(Action : Registrar)** |
| ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು | |
| **1** | ತೋವಿವಿ, ಬಾಗಲಕೋಟದ 7ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಗೆ ಸ್ಥಿರೀಕರಣ. |
| | ಚರ್ಚೆ ಮತ್ತು ಠರಾವು :<br>ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ವ್ಯವಸ್ಥಾಪನ ಮಂಡಳಿಯು ಅನುಮೋದಿಸಿದ 7ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯಲ್ಲಿ ಡಾ. ಸುಧಾ ಮೂರ್ತಿ, ಅಧ್ಯಕ್ಷರು, ಇನ್ಫೋಸಿಸ್ ಫೌಂಡೇಶನ್, ಬೆಂಗಳೂರು ಇವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸುವ ಬಗ್ಗೆ ಪ್ರಸ್ತಾಪಿಸಿದರು. ಪೂರಕವಾಗಿ ಡಾ. ಸುಧಾ ಮೂರ್ತಿ ಇವರ ಅಲಭ್ಯತೆಯ ಬಗ್ಗೆ ಗೌರವಾನ್ವಿತ |

| | |
|---|---|
| | ಕುಲಪತಿಗಳು ಮಂಡಳಿಗೆ ವಿವರಿಸಿದರು. ಮುಂದುವರೆದು, ಸದಸ್ಯರು 7ನೇ ಘಟಿಕೋತ್ಸವದ ಮುಖ್ಯ ಅತಿಥಿಗಳನ್ನಾಗಿ ಡಾ. ಸಿ. ಡಿ. ಮಾಯಿ ಇವರನ್ನು ಆಯ್ಕೆ ಮಾಡುವ ಪೂರ್ವದಲ್ಲಿ ವ್ಯವಸ್ಥಾಪನ ಮಂಡಳಿಯ ಅನುಮೋದನೆ ಕುರಿತಂತೆ ಸಭೆಯಲ್ಲಿ ಸುದೀರ್ಘ ಚರ್ಚಿಸಿ, ನಂತರ ವ್ಯವಸ್ಥಾಪನ ಮಂಡಳಿಯು 7ನೇ ಘಟಿಕೋತ್ಸವದ ಮುಖ್ಯ ಅತಿಥಿಗಳನ್ನಾಗಿ ಡಾ. ಸಿ. ಡಿ. ಮಾಯಿ ಇವರನ್ನು ಆಯ್ಕೆ ಮಾಡಿರುವ ಕ್ರಮವನ್ನು ವ್ಯವಸ್ಥಾಪನ ಮಂಡಳಿಗೆ ಮನವರಿಕೆ ಮಾಡಿದ ಮೇರೆಗೆ ಮುಖ್ಯ ಅತಿಥಿಗಳ ಕುರಿತ ವಿಷಯವನ್ನು ಸ್ಥಿರೀಕರಿಸಲಾಯಿತು.<br>(ಕ್ರಮ : ಕುಲಸಚಿವರು) |
| 1 | **Ratification for the panel of Chief Guests of 7th Convocation of UHS, Bagalkot.** |
| | **Discussion & Resolution :**<br>Hon'ble Member Dr. Y. B. Patil expressed his views regarding inviting Dr. Sudha Murthy, Chairman, Infosys Foundation, Bengaluru as Chief Guest of 7th Convocation out of approved panel of Chief Guest by the Board. In response to this, Hon'ble Vice-Chancellor explained to the Board regarding unavailability of Dr. Sudha Murthy. Further, the member appraised the Board that, the University has not taken prior approval for selection of Dr. C D Mayee as Chief Guest of 7th Convocation of UHS Bagalkot. After detailed deliberations, the Board ratified the action taken by the University with regard to selection of Dr. C. D. Mayee as Chief Guest of 7th Convocation.<br>**(Action : Registrar)** |
| 2 | ವಿಶ್ವವಿದ್ಯಾಲಯದ ಮಟ್ಟದಲ್ಲಿ ಒಂದು ಚಿನ್ನದ ಪದಕವನ್ನು ವಿತರಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಗೌರವಾನ್ವಿತ ಸದಸ್ಯರುಗಳು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಹಾವಿದ್ಯಾಲಯವಾರು ಪ್ರಸ್ತುತ ನೀಡಲಾಗುತ್ತಿರುವ ಚಿನ್ನದ ಪದಕಗಳ ಬದಲಾಗಿ ಕೇವಲ ಒಂದು ಚಿನ್ನದ ಪದಕವನ್ನು ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ನೀಡುವ ಕುರಿತು ಪ್ರಸ್ತಾಪಿಸಿದರು. ಈ ವಿಷಯವಾಗಿ ವಿಶ್ವವಿದ್ಯಾಲಯದ ಶೈಕ್ಷಣಿಕ ನಿಯಮಗಳ ಕಲಂ 18.1 ರ ಅನುಸಾರ ಪ್ರತಿ ಮಹಾವಿದ್ಯಾಲಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಮಹಾವಿದ್ಯಾಲಯವಾರು ಚಿನ್ನದ ಪದಕಗಳನ್ನು ನೀಡಲು ಅವಕಾಶ ಇರುವುದನ್ನು ಮಂಡಳಿ ಗಮನಕ್ಕೆ ತರಲಾಗಿದೆ. ಸುದೀರ್ಘ ಚರ್ಚೆಯ ನಂತರ, ಪ್ರತಿ ಮಹಾವಿದ್ಯಾಲಯದ ಮಟ್ಟದಲ್ಲಿ ಚಿನ್ನದ ಪದಕದ ಬದಲಾಗಿ ಕೇವಲ |

| | |
|---|---|
| | ಒಂದು ಚಿನ್ನದ ಪದಕವನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ ನೀಡುವ ಕುರಿತು ಸಾಧ್ಯತೆಗಳನ್ನು ವಿಶ್ಲೇಷಿಸುವ ಕ್ರಮಗಳಿಗೆ ತೀರ್ಮಾನಿಸಲಾಯಿತು.<br>(ಕ್ರಮ : ಕುಲಸಚಿವರು) |
| **2** | **Award of University Level one Gold Medal – reg.** |
| | **Discussion & Resolution :**<br>Hon'ble Members of the Board proposed to award one Gold Medal to the student who secures highest marks at University level instead of awarding Gold Medals college wise. It was brought to the Board that, as per the section 18.1 of Academic Regulations of UHS Bagalkot, there is provision for award of Gold Medals college wise students who secures highest marks in the respective colleges. After detailed discussion, the Board suggested to explore the possibility for awarding Gold Medal to the student who secures highest marks at University level instead of awarding Gold Medals college wise.<br>**(Action : Registrar)** |
| **3** | **ತೋವಿವಿ ಬಾಗಲಕೋಟದ 2018–19ನೇ ಸಾಲಿನ ಆಯವ್ಯಯಕ್ಕೆ ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>2017–18ನೇ ಹಣಕಾಸು ವರ್ಷವು ದಿನಾಂಕ 31.03.2018ರಂದು ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ, 2018–19ನೇ ಹಣಕಾಸು ವರ್ಷಕ್ಕೆ ವಿಶ್ವವಿದ್ಯಾಲಯದ ಅಂದಾಜು ಆಯವ್ಯಯವನ್ನು ತಯಾರಿಸಿ, ಕೂಡಲೇ ವ್ಯವಸ್ಥಾಪನ ಮಂಡಳಿಯ ಅನುಮೋದನೆಗಾಗಿ ಮಂಡಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| **3** | **Approval to the budget of UHS Bagalkot for the year 2018-19.** |
| | **Discussion & Resolution :**<br>In view of completion of financial year 2017-18 on 31.03.2018, the Board directed the University to prepare the proposed budget of the University for the year 2018-19 and place the same before the Board of Management immediately for approval.<br>**(Action : Comptroller)** |

| | |
|---|---|
| 4 | ತೋವಿವಿ, ಬಾಗಲಕೋಟದ ಅಧೀನದಲ್ಲಿ ಖಾಸಗಿ ಸಂಸ್ಥೆಗಳ ಸಂಯೋಜನೆ ಮಾಡುವ ಸಲುವಾಗಿ ಪರಿಶೀಲನೆಗಾಗಿ ಸ್ಥಳೀಯ ವಿಚಾರಣ ಸಮಿತಿಯಲ್ಲಿ ವ್ಯವಸ್ಥಾಪನ ಮಂಡಳಿಯ ಓರ್ವ ಅಧಿಕಾರೇತರ ಸದಸ್ಯರನ್ನು ಸೇರ್ಪಡೆ ಮಾಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ದಿನಾಂಕ 23.02.2018 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 43ನೇ ಸಭೆಯ ನಿರ್ಧಾರದಂತೆ, ತೋವಿವಿ, ಬಾಗಲಕೋಟದ ಅಧೀನದಲ್ಲಿ ಖಾಸಗಿ ಸಂಸ್ಥೆಗಳ ಸಂಯೋಜನೆ ಮಾಡುವ ಸಲುವಾಗಿ ಪರಿಶೀಲನೆಗಾಗಿ ಸ್ಥಳೀಯ ವಿಚಾರಣ ಸಮಿತಿಯಲ್ಲಿ ವ್ಯವಸ್ಥಾಪನ ಮಂಡಳಿಯ ಓರ್ವ ಅಧಿಕಾರೇತರ ಸದಸ್ಯರನ್ನು ಸೇರ್ಪಡೆ ಮಾಡುವ ಕುರಿತು ಸರ್ಕಾರದಿಂದ ಸ್ಪಷ್ಟೀಕರಣ ಪಡೆಯುವ ಬದಲಾಗಿ ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಓರ್ವ-ಅಧಿಕಾರೇತರ ಸದಸ್ಯರನ್ನು ಒಳಗೊಂಡಂತೆ ಸ್ಥಳೀಯ ವಿಚಾರಣ ಸಮಿತಿಯನ್ನು ರಚಿಸಲು ವಿಶ್ವವಿದ್ಯಾಲಯಕ್ಕೆ ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ಸಲಹೆ ನೀಡಿದರು.<br>(ಕ್ರಮ : ಕುಲಸಚಿವರು) |
| 4 | **Inclusion of one non-official member of Board of Management in the Local Inquiry Committee to be constituted for inspection of private colleges for affiliation under UHS, Bagalkot.** |
| | **Discussion & Resolution :**<br>Hon'ble Member Dr. Y. B. Patil suggested the University to include one non-official member of Board of Management in the Local Inquiry Committee to be constituted for inspection of private colleges for affiliation under UHS, Bagalkot at University level instead of getting clarification from the Government. In this regard as per the decision of 43rd Meeting of Board of Management held on 23.02.2018.<br>**(Action : Registrar)** |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳವರಿಂದ ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks by the Registrar and Member Secretary.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member-Secretary**
**Board of Management, UHS, Bagalkot**